1814(2838) ಶ್ರೀ ಪಾಟೀಲ್ ಡಿ.ಆರ್. (ಗದಗ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ನೂಲಿನ ಗಿರಣಿಗಳು ಎಷ್ಟು;

ಆ) ಅವುಗಳಲ್ಲಿ ಖಾಸಗಿ, ರಂಗದಲ್ಲಿ, ಜಂಟಿ ರಂಗದಲ್ಲಿ ಮತ್ತು ಸಹಕಾರ ರಂಗದಲ್ಲಿ ಎಷ್ಟಿವೆ?

ಇ) ಇವುಗಳಲ್ಲಿ ಎಷ್ಟು ಕಾರ್ಯನಿರತವಾಗಿವೆ? ಎಷ್ಟು ಮುಚ್ಚಿವೆ?

ಈ) ಈ ಜವಳಿ ಗಿರಣಿಗಳಿಗೆ ಸರಬರಾಜು ಮಾಡುತ್ತಿರುವ ವಿದ್ಯುಚ್ಛಕ್ತಿ ದರಗಳು ಏನು ಹಾಗೂ ಇದೇ ವಿದ್ಯುಚ್ಛಕ್ತಿಗೆ 5 ವರ್ಷಗಳ ಹಿಂದೆ ಇದ್ದ ದರಗಳೇನು?

ಶ್ರೀ ಸತೀಶ್. ಎಲ್ ಜಾರಕಿಹೊಳಿ (ಜವಳಿ ರಾಜ್ಯ ಸಚಿವರು):

ಅ) ಈ ಇಲಾಖೆ ಮಾರ್ಚ್ 2003 ರಲ್ಲಿ ಸಂಗ್ರಹಿಸಿರುವ ಮಾಹಿತಿ ಪ್ರಕಾರ ರಾಜ್ಯದಲ್ಲಿ ಒಟ್ಟು 73 ನೂಲಿನ ಗಿರಣಿಗಳು ಇರುತ್ತವೆ.

ಆ) ಖಾಸಗಿ ರಂಗದಲ್ಲಿ 57 ಗಿರಣಿಗಳು ಹಾಗೂ ಸಹಕಾರ ರಂಗದಲ್ಲಿ 16 ಗಿರಣಿಗಳು ಮಾತ್ರ ಇರುತ್ತವೆ.

ಇ) ಇವುಗಳಲ್ಲಿ 48 ಗಿರಣಿಗಳು ಕಾರ್ಯನಿರ್ವಹಿಸುತ್ತಿವೆ. 10 ಗಿರಣಿಗಳು ಕಾರ್ಯಸ್ಥಗಿತಗೊಂಡಿವೆ. ಮತ್ತು 15 ಗಿರಣಿಗಳು ಸಮಾಪನೆಗೊಂಡಿರುತ್ತವೆ.

ಈ) ಸರಾಸರಿ ವಿದ್ಯುಚ್ಛಕ್ತಿ ದರಗಳು 2000ನೇ ಸಾಲಿನಲ್ಲಿ ರೂ.4.20 ಇತ್ತು. ಈಗ ಅದು ಒಂದು ಯೂನಿಟ್‌ಗೆ ರೂ.4.80 ಆಗಿರುತ್ತದೆ.

1842(2840) ಶ್ರೀ ಡಿ.ಆರ್.ಪಾಟೀಲ್ (ಗದಗ್) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಂದು ಟನ್ ಕಬ್ಬನ್ನು ಅರೆದಾಗ ಅದರಿಂದ ಉತ್ಪಾದನೆಗೊಂಡ ಎಲ್ಲಾ ವಸ್ತುಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಂದಾಯವಾಗುತ್ತಿರುವ ತೆರಿಗೆ ಎಷ್ಟು;

ಆ) ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಕಬ್ಬು ಅರೆಯುವ ಕಾರ್ಖಾನೆಗಳಲ್ಲಿ ಮಾಡುತ್ತಿರುವ ಸೌಲಭ್ಯಗಳು ಏನು;

ಇ) ಒಂದು ಹೊಸ ಪ್ರತಿ ನಿತ್ಯ 500 ಟನ್ ಕಬ್ಬು ಅರೆಯುವ ಕಬ್ಬಿನ ಕಾರ್ಖಾನೆಯಿಂದ ರೈತರಿಗೆ, ಕಾರ್ಮಿಕರಿಗೆ ಮತ್ತು ಸಮಾಜಕ್ಕೆ ಆಗುವ ಅನುಕೂಲತೆಗಳೇನು;

ಈ) ಈಗ ನಮ್ಮ ರಾಜ್ಯದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳೆಷ್ಟು ಇವುಗಳಲ್ಲಿ ಖಾಸಗಿ ರಂಗದಲ್ಲಿ, ಸಹಕಾರ ರಂಗದಲ್ಲಿ ಮತ್ತು ಜಂಟಿ ರಂಗದಲ್ಲಿ ಇರುವವೆಷ್ಟು;

ಉ) ಇವುಗಳ ಅರೆಯುವ ಕಬ್ಬಿನ ಪ್ರಮಾಣವೇನು ಹಾಗೂ ಉತ್ಪಾದಿಸಿದ ಸಕ್ಕರೆ ಪ್ರಮಾಣವೇನು

ಊ) ಕಳೆದ ಮೂರು ವರ್ಷಗಳಲ್ಲಿ ಕಬ್ಬು ಬೆಳೆಗಾರರಿಗೆ ನೀಡಿರುವ ಕಬ್ಬಿನ ದರವೆಷ್ಟು (ಕಾರ್ಖಾನೆವಾರು ಮಾಹಿತಿ ನೀಡಿ)?